ಹೇಗೆ? ಇಂತಹ ಕಡೆ ಮಾತ್ರ ಮೇಲೆ ಕೆಳಗೆ, ಸೀನಿಯರ್ ಜೂನಿಯರ್ ಅನ್ನುವ ಭೇದಭಾವವಿಲ್ಲದೆ, ಕೆಲಸದ ಒತ್ತಡ ಮರೆತು ಎಲ್ಲ ಸಹೋದ್ಯೋಗಿಗಳೂ ಕೆಲಕಾಲ ಸಂತೋಷಪಡಬಹುದಿತ್ತು. "ವಿಶ್ ಈಸ್ ಕೂಲ್" ಅಂತ ಅವರು ತನ್ನ ಜೊತೆ ಹೊಂದಿಕೊಳ್ಳುವಂತೆ ಮಾಡಲು, ತನ್ನ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿಸಲು ಇದೊಂದು ಸದವಕಾಶ ಅಂತ ವಿಶ್ವ ಅಂದುಕೊಂಡಿದ್ದ.

'ಹೋಗಿದ್ದು ತಪ್ಪಲ್ಲ, ಆದರೆ ಹೋದ ಮಾತ್ರಕ್ಕೆ ಕೆಟ್ಟದಾಗಿ ನಡೆದುಕೊಳ್ಳಬೇಕು ಅಂತೇನಿಲ್ಲ ಅಲ್ಲವಾ?'

'ತಪ್ಪು ನಾನೊಬ್ಬನೇ ಮಾಡಿದ್ದಾ? ಅಷ್ಟಕ್ಕೂ ಅವಳು ಮಾಡಿದ್ದು ಕೂಡ ತಪ್ಪೇ ಅಲ್ಲವಾ? ಪರದೇಶದ ಸಂಸ್ಕೃತಿ ಗೊತ್ತಿಲ್ಲದ ನನ್ನ ಹತ್ತಿರ ಯಾಕೆ ಚೆಲ್ಲಾಟ ಆಡಕ್ಕೆ ಬರಬೇಕಿತ್ತು?'

'ಅವಳು ಬಂದಳು ಸರಿಯಪ್ಪ, ಹಾಗಂತ ಅಪ್ಪಟ ಭಾರತೀಯ ನೀನು, ನಿನಗೆ ಸಂಯಮ ಬೇಡವಾ?'

'ಪ್ರಪಂಚದಲ್ಲಿ ಹೆಣ್ಣು ಪುರುಷನ ಕಡೆ ತಪ್ಪು ಮಾಡಿದನೆಂದು ಬೆರಳು ಮಾಡಿದರೆ, ಅವಳೇ ಗೆಲ್ಲುವುದು. ಗಂಡಸು ಯಾವಾಗಲೂ ಅಪರಾಧಿಯೇ. ಅದರಲ್ಲೂ ಇದು ಇಂಗ್ಲೆಂಡ್. ತಮ್ಮ ಹೆಸರಿಗೇನಾಗುತ್ತದೆ ಎನ್ನುವ ಬಗ್ಗೆ ಇಲ್ಲಿನ ಮಹಿಳೆಯರು ತಲೆ ಕೆಡಿಸಿಕೊಳ್ಳುವುದಿಲ್ಲ. ಸಮಾಜ ನೊಂದ ವನಿತೆಯರಿಗೆ 'ಅಯ್ಯೋ ಪಾಪ' ಎಂದು ಮರುಕ ತೋರುತ್ತದೆಯೇ ಹೊರತು ಅವರನ್ನು ಜರಿಯುವುದಿಲ್ಲ. ಅದರಲ್ಲೂ ನೀನು ಪರದೇಶದವ. ವಿಚಾರ ಸೆಕ್ಸ್‌ಗೆ ಸಂಬಂಧ ಪಟ್ಟದ್ದು. ವೃತ್ತಿಗೆ ಸಂಬಂಧ ಪಟ್ಟದ್ದಲ್ಲ. ಹಾಗಾಗಿ ಭಾರತಕ್ಕೆ ಓಡಿ ಹೋದರೂ, ಹುಡುಕಿ ಕರಕೊಂಡು ಬಂದು ಜೈಲಿಗೆ ಹಾಕಿದರೆ?'

ಹೀಗೆ ತನ್ನೊಳಗೇ ಪರ ಮತ್ತು ವಿರೋಧಗಳ ವಾದ ಮಾಡುತ್ತಿದ್ದ ವಿಶ್ವನಿಗೆ, ತಕ್ಷಣ ರಾಮಚಂದ್ರನ್ ನೆನಪು ಬಂತು. ಅವನು ತಾನಾಗೇ ಇಂಡಿಯಾಕ್ಕೆ ಹೋಗಿಬಿಟ್ಟ. ಅವನ ವಿಚಾರವೆಲ್ಲ ವಿಶದವಾಗಿ ಬಿಚ್ಚಿಕೊಳ್ಳತೊಡಗಿದಂತಾಗಿ ವಿಶ್ವ ಮತ್ತಷ್ಟು ಬೆಚ್ಚಿದ.

★★★

ರಾಮಚಂದ್ರನ್ ತಮಿಳುನಾಡಿನವ. ಅತ್ಯುತ್ತಮ ವಿದ್ಯಾರ್ಥಿ ಎನ್ನುವ ಅಂಕಪಟ್ಟಿ, ಒಳ್ಳೆಯ ದಾಖಲೆಗಳಿರುವ ಸಿ.ವಿ. ಇದ್ದವನು. ಸಂದರ್ಶನದಲ್ಲೂ ಒಪ್ಪುವ ಉತ್ತರಗಳನ್ನು ಕೊಟ್ಟು ಸ್ಕಾಲರ್‌ಶಿಪ್ ಪಡೆದು ಆಯ್ಕೆಯಾಗಿ ಬಂದಿದ್ದ.

ಮೆರಿಟ್‌ನಲ್ಲಿ ಪಾಸಾದ ಒಬ್ಬನೇ ಮಗನಿಗೆ ವಿದೇಶಕ್ಕೆ, ಅದರಲ್ಲೂ ವೈದ್ಯ ವೃತ್ತಿಗೆ ಹೆಸರಾದ ಇಂಗ್ಲೆಂಡಿಗೆ ಹೋಗಲು ಹುಡುಕಿಕೊಂಡು ಬಂದಿರುವ ಅವಕಾಶವನ್ನು ಹಾಳು ಮಾಡಬಾರದು ಅಂತ ಅವನ ತಂದೆ ನಿರ್ಧರಿಸಿದ್ದರು. ಅವರ ಹೆಂಡತಿ ವಿರೋಧಿಸಿದರೂ ತಾನು ನಿವೃತ್ತನಾದಾಗ ಬಂದ ಪೆನ್ಶನ್ ಹಣವನ್ನು ಏರೋಪ್ಲೇನ್ ಟಿಕೆಟ್‌ಗೆ ಮತ್ತು ಕೈಗೊಂದಿಷ್ಟು ಕಾಸಿರಲಿ ಅಂತ ಕೊಟ್ಟು ಕಳಿಸಿದ್ದರು. ಅವನಗಿನ್ನು ಮದುವೆಯೂ ಆಗಿರಲಿಲ್ಲ. ಅವನು ಕಡುಗಪ್ಪು ಬಣ್ಣದ ಆಕರ್ಷಕ ಹುಡುಗ.

ಪದವಿ ಗಳಿಸಿದ ವೈದ್ಯನೇ ಆದರೂ ಇಲ್ಲಿಗೆ ಬಂದು ಅತ್ಯಂತ ವಿಧೇಯ ವಿದ್ಯಾರ್ಥಿಯಂತೆ ಸರ್ಜರಿಯ ಕೆಲಸ ಕಲಿಯುತ್ತಿದ್ದವನು. ವಯಸ್ಸಿನ ಹುಡುಗನೇ ಆದರೂ ಕಲಿಕೆ ಮುಗಿಯುವ ತನಕ ಸನ್ಯಾಸ ಸ್ವೀಕರಿಸಿದವನಂತೆ ಇಂಗ್ಲೆಂಡಿನ ಯಾವ ಹುಡುಗಿಯನ್ನೂ ಕಣ್ಣೆತ್ತಿ ನೋಡದೆ ಕೆಲಸ ಮಾಡಿಕೊಂಡಿದ್ದ.

ಅಷ್ಟಕ್ಕೂ ವಯಸ್ಸಿನ ಆಕರ್ಷಣೆಗಳು, ಲೈಂಗಿಕ ಬಯಕೆಗಳು ಅನ್ನುವುದನ್ನೆಲ್ಲ ಇಲ್ಲಿಗೆ ತರಬೇತಿಯ ಕೆಲಸಗಳಿಗಾಗಿ ಒಂಟಿಯಾಗಿ ಬರುವ ನಮ್ಮ ಹುಡುಗರು ಕಟ್ಟಿಟ್ಟುಬಿಡಬೇಕಾಗುತ್ತದೆ. ಇಲ್ಲಿನ ಕೆಲಸದ ನಿಯಮಗಳ ಪ್ರಕಾರ ಮತ್ತು ವೈದ್ಯರನ್ನು ನೋಂದಾಯಿಸಿಕೊಳ್ಳುವ ಸಂಸ್ಥೆಗಳ ಪ್ರಕಾರ, ವೈದ್ಯರು ರೋಗಿಯ ಜೊತೆ, ಸಹೋದ್ಯೋಗಿಗಳ ಜೊತೆ ವೃತ್ತಿಪರ ಸಂಬಂಧಗಳ ಹೊರತು ಬೇರೆ ರೀತಿಯಲ್ಲಿ ಒಡನಾಡುವಂತಿಲ್ಲ. ಯಾವುದೇ ಹೊಡೆದಾಟಗಳಲ್ಲಿ ತೊಡಗುವಂತಿಲ್ಲ. ಬರೀ ಆಸ್ಪತ್ರೆಯಲ್ಲಿ